# ಹಿಂದೂ ರಾಷ್ಟ್ರದ ಸ್ಥಾಪನೆಯ ದಿಶೆ

## ಮನೋಗತ

ಹಿಂದೂ ಧರ್ಮದ ಮತ್ತು ಭಾರತವರ್ಷದ ವೈಶಿಷ್ಟ್ಯವೆಂದರೆ, ಇಲ್ಲಿ ಭವಿಷ್ಯದಲ್ಲಿ ಘಟಿಸುವ ಅದ್ವಿತೀಯ ಘಟನೆಗಳನ್ನು ಅವು ಘಟಿಸುವ ಮೊದಲೇ ಹೇಳಲಾಗುತ್ತದೆ. ವಾಲ್ಮೀಕಿ ಋಷಿಗಳು ತಮ್ಮ ಅಲೌಕಿಕ ಪ್ರತಿಭಾದೃಷ್ಟಿಯಿಂದ ಮೊದಲು ರಾಮಾಯಣವನ್ನು ರಚಿಸಿದರು. ನಂತರ ಪ್ರಭು ಶ್ರೀರಾಮನ ಅವತಾರವಾಗಿ ಐತಿಹಾಸಿಕ 'ರಾಮರಾಜ್ಯ' ಭೂತಲದಲ್ಲಿ ಅವತರಿಸಿತು. ಭಗವಾನ್ ಶ್ರೀಕೃಷ್ಣನು ಜನಿಸುವ ಮೊದಲೂ ದೈವೀ ಅಶರೀರವಾಣಿಯಾಯಿತು. ಅಶರೀರವಾಣಿಗನುಸಾರ ಜನಿಸಿದ ಭಗವಾನ್ ಶ್ರೀಕೃಷ್ಣನು ಧರ್ಮಸಂಸ್ಥಾಪನೆ ಮಾಡಿದನು ಮತ್ತು ಪೃಥ್ವಿಯ ಮೇಲೆ ಪುನಃ 'ಧರ್ಮರಾಜ್ಯ' ಅವತರಿಸಿತು. ಅಧ್ಯಾತ್ಮದಲ್ಲಿನ ಅಧಿಕಾರಿ ವ್ಯಕ್ತಿಯಾದ ಪರಾತ್ಪರ ಗುರು ಡಾ. ಆಠವಲೆಯವರು ಮೊತ್ತಮೊದಲು ೧೯೯೮ ರಲ್ಲಿ 'ಭಾರತದಲ್ಲಿ ೨೦೨೩ ರಲ್ಲಿ 'ಈಶ್ವರೀ ರಾಜ್ಯ' ಅಂದರೆ 'ಹಿಂದೂ ರಾಷ್ಟ್ರ'ದ ಸ್ಥಾಪನೆಯಾಗುವುದು' ಎಂಬ ವಿಚಾರವನ್ನು ದಾರ್ಶನಿಕತೆಯಿಂದ ಮಂಡಿಸಿದ್ದರು. ಆಗಿನಿಂದಲೇ ಅವರು 'ಹಿಂದೂ ರಾಷ್ಟ್ರ'ದ ಬಗ್ಗೆ ಸತತ ವೈಚಾರಿಕ ಮತ್ತು ಆಧ್ಯಾತ್ಮಿಕ ಸ್ತರದಲ್ಲಿ ಲೇಖನಗಳನ್ನು ಬರೆಯುತ್ತಿದ್ದಾರೆ. ಈ ವಿಚಾರಗಳಲ್ಲಿ ಮುಂಬರುವ ಕಾಲದಲ್ಲಿ ಅಗಬೇಕಾದ ಆದರ್ಶ ರಾಷ್ಟ್ರರಚನೆ, ಅಂದರೆ ಧರ್ಮಸಂಸ್ಥಾಪನೆಯ ಬೀಜವನ್ನು ಬಿತ್ತಿದ್ದಾರೆ. ಹಿಂದೂ ರಾಷ್ಟ್ರದ ಸ್ಥಾಪನೆಯ ಯಾವುದೇ ಆಶಾದಾಯಕ ಘಟನೆಗಳು ಸ್ಥೂಲದಲ್ಲಿ ಘಟಿಸದಿರುವಾಗ 'ಹಿಂದೂ ರಾಷ್ಟ್ರ'ದ ಬಗ್ಗೆ ಹೇಳುವುದು ಕೆಲವರಿಗೆ ಅತಿಶಯೋಕ್ತಿಯೆನಿಸಬಹುದು; ಆದರೆ ಕಾಲದ ಹೆಜ್ಜೆಗಳನ್ನು ಗುರುತಿಸಬಲ್ಲ ಸಂತರಿಗೆ ಆ ಉಜ್ವಲ ಭವಿಷ್ಯದ ಪೂರ್ವಸೂಚನೆ ಸಿಕ್ಕಿದೆ. ನಾವು ಆ ದಿಶೆಯಲ್ಲಿ ಪ್ರಯತ್ನಿಸುವುದು ನಮ್ಮ ಸಾಧನೆಯಾಗಿದೆ.

ಪರಾತ್ಪರ ಗುರು ಡಾ. ಆಠವಲೆಯವರು ಆಗಾಗ 'ಹಿಂದೂ ರಾಷ್ಟ್ರ'ದ ವಿಷಯದಲ್ಲಿ ಬರೆದ ಒಟ್ಟು ವಿಚಾರಗಳ ಪೈಕಿ ಕೇವಲ ಹಿಂದೂ ರಾಷ್ಟ್ರದ ಸ್ಥಾಪನೆಗೆ ದಿಶೆ ನೀಡುವ ವಿಚಾರಗಳನ್ನು ಮಾತ್ರ ಈ ಗ್ರಂಥದಲ್ಲಿ ಸೇರಿಸಲಾಗಿದೆ. ಈ ಗ್ರಂಥವೆಂದರೆ ಪರಾತ್ಪರ ಗುರು ಡಾ. ಆಠವಲೆಯವರ ವಿಚಾರಸಂಗ್ರಹವಾಗಿದ್ದು ಅದರಲ್ಲಿ ಅವರ ಚಿಕ್ಕ ಲೇಖನ ಮತ್ತು ದೊಡ್ಡ ಲೇಖನಗಳೆರಡನ್ನೂ ಸೇರಿಸಲಾಗಿದೆ. 'ಹಿಂದೂ ರಾಷ್ಟ್ರ' ಎಂಬ ಶಬ್ದದ ವ್ಯಾಖ್ಯೆಯನ್ನು ಅನೇಕ ವಿಚಾರವಂತರು ಭೂಗೋಳ, ಇತಿಹಾಸ, ಸಂಸ್ಕೃತಿ ಮತ್ತು ತತ್ತ್ವಜ್ಞಾನದ ಆಧಾರದಲ್ಲಿ ಮಾಡಿದ್ದಾರೆ. ಪರಾತ್ಪರ ಗುರು ಡಾ. ಆಠವಲೆಯವರು 'ಹಿಂದೂ ರಾಷ್ಟ್ರ'ದ ವಿಷಯವನ್ನು ಆಧ್ಯಾತ್ಮಿಕ ದೃಷ್ಟಿಕೋನದಿಂದ ಮಂಡಿಸಿದ್ದಾರೆ. ವಿಶ್ವಕಲ್ಯಾಣದ ವ್ಯಾಪಕ ಆಧ್ಯಾತ್ಮಿಕ ಬೋಧನೆಯನ್ನು ನೀಡುವ ಭಾರತದಲ್ಲಿ ಮಾತ್ರವಲ್ಲ, ಪೃಥ್ವಿಯ ಮೇಲೆ ಎಲ್ಲೆಡೆ 'ಹಿಂದೂ ರಾಷ್ಟ್ರ'ವನ್ನು ಸ್ಥಾಪಿಸುವುದು ಒಂದು ಆಧ್ಯಾತ್ಮಿಕ ಪ್ರಕ್ರಿಯೆಯಾಗಿದೆ ಎಂಬುದು ಈ ಗ್ರಂಥದಿಂದ ಸಹಜವಾಗಿ ಅರಿವಾಗುವುದು.

ಸ್ವಾತಂತ್ರ್ಯವೀರ ಸಾವರಕರ, ಆದ್ಯ ಸರಸಂಘಚಾಲಕರಾದ ಡಾ. ಹೆಡಗೇವಾರ, ಪೂ. ಗೋಳವಲಕರ ಗುರೂಜಿ ಮುಂತಾದ ಶ್ರೇಷ್ಠ ಪುರುಷರೂ ಹಿಂದೂ ರಾಷ್ಟ್ರದ ವಿಚಾರವನ್ನು ಪ್ರಖರವಾಗಿ ಮಂಡಿಸಿದ್ದರು. ಸ್ವಯಂಭೂ ಹಿಂದೂ ರಾಷ್ಟ್ರವಾಗಿದ್ದ ಭಾರತವರ್ಷವು ಸ್ವಾತಂತ್ರ್ಯಪ್ರಾಪ್ತಿಯ ನಂತರ ದುರ್ದೈವದಿಂದ ಜಾತ್ಯತೀತ ರಾಷ್ಟ್ರ ವಾಯಿತು ಮತ್ತು 'ಹಿಂದೂ ರಾಷ್ಟ್ರ'ದ ತೇಜಸ್ವಿ ಸಂಕಲ್ಪನೆಯು ಮುಚ್ಚಿಹೋಯಿತು. 'ರಾಮರಾಜ್ಯ' ಪ್ರತ್ಯಕ್ಷ ಅವತರಿಸಿದ್ದರೂ, ಆ ರಾಜ್ಯವನ್ನು ಇಂದು ದಂತಕಥೆ ಎಂದು ಹೇಳಲಾಗುತ್ತಿದೆ. ಛತ್ರಪತಿ ಶಿವಾಜಿ ಮಹಾರಾಜರು ಸ್ಥಾಪಿಸಿದ 'ಹಿಂದವೀ ಸ್ವರಾಜ್ಯ' ಅಂದರೆ, 'ಹಿಂದೂ ರಾಷ್ಟ್ರ'ವನ್ನು ಮರೆಸುತ್ತಾ ಅದಕ್ಕೆ 'ಜಾತ್ಯತೀತ ರಾಜ್ಯ'ದ ಹೆಸರಿನಡಿ ಯಲ್ಲಿ 'ಹಸಿರು ಬಣ್ಣ' ಬಳಿಯುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಅದಕ್ಕಿಂತಲೂ ಮುಂದೆ ಹೋಗಿ 'ಹಿಂದೂ ರಾಷ್ಟ್ರವೆಂದರೆ ಮತಾಂಧತೆ' ಎಂದು ಬೇಕೆಂದೇ ಅಪಪ್ರಚಾರ ಮಾಡಲಾಗುತ್ತಿದೆ. ಈ ಜಾತ್ಯತೀತತೆಯಿಂದಾಗಿ ದೇಶದಲ್ಲಿ ಅಸಂಖ್ಯಾತ ಸಮಸ್ಯೆಗಳು ನಿರ್ಮಾಣವಾಗಿದ್ದರೂ ಜಾತ್ಯತೀತತೆಯ ಬಗ್ಗೆ ಅಂಧಶ್ರದ್ಧೆ ಇರುವುದರಿಂದ ಈಗಲೂ ಅವರಿಗೆ ಭಾರತ 'ಜಾತ್ಯತೀತ ರಾಷ್ಟ್ರ'ವಾಗಿರಬೇಕೆಂದು ಅನಿಸುತ್ತದೆ. 'ಹಿಂದೂ ರಾಷ್ಟ್ರ'ದ ವಿಷಯಕ್ಕೆ ಅವರು ಯಾವುದೇ ಮಹತ್ವ ನೀಡಿಲ್ಲ. ಅವರಿಗೆ ಈಗ 'ಜಾತ್ಯತೀತ ರಾಜ್ಯ'ವೋ ಅಥವಾ 'ಹಿಂದೂ ರಾಜ್ಯ'ವೋ ಎಂಬುದು ನಿಜವಾದ ಪ್ರಶ್ನೆಯಾಗಿರದೇ 'ಇಸ್ಲಾಮಿ ರಾಜ್ಯವೋ ಅಥವಾ 'ಹಿಂದೂ ರಾಜ್ಯ'ವೋ ? ಎಂಬ ಪ್ರಶ್ನೆಯು ಮುಂಬರುವ ೨-೩ ವರ್ಷಗಳಲ್ಲಿ ಉದ್ಭವಿಸಲಿದೆ ಎಂಬುದು ತಿಳಿದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೇವಲ ಹಿಂದೂಸಂಘಟನೆ ಮಾಡುವ ವಿಚಾರಧಾರೆಯೇ ಈ ದೇಶದ ರಕ್ಷಣೆ ಮತ್ತು ಹಿಂದೂ ರಾಷ್ಟ್ರದ ನಿರ್ಮಾಣವನ್ನು ಮಾಡಬಲ್ಲದು. ಹಿಂದೂ ರಾಷ್ಟ್ರದ ಆಕಾಂಕ್ಷೆ ಸಫಲವಾಗಲು ಹಿಂದೂ ಸಮಾಜದಲ್ಲಿ ಹಿಂದೂ ರಾಷ್ಟ್ರದ ಬಗೆಗಿನ ವಿಚಾರ, ಉಚ್ಚಾರ ಮತ್ತು ಆಚಾರವು ಎಲ್ಲೆಡೆ ಒಂದೇ ರೀತಿ ಕಾಣಿಸಬೇಕು. ಆದ್ದರಿಂದಲೇ 'ಹಿಂದೂ ಸಮಾಜದ ವಿವಿಧ ಘಟಕಗಳು, ಉದಾ. ಹಿಂದೂ ಸಂಘಟನೆಗಳು, ಸಂಪ್ರದಾಯಗಳು, ಸಂತರು, ನ್ಯಾಯವಾದಿ ಗಳು, ವಿಚಾರವಂತರು ಮುಂತಾದವರು 'ಹಿಂದೂ ರಾಷ್ಟ್ರ'ವನ್ನು ಸ್ಥಾಪಿಸಲು ಹೇಗೆ ಪ್ರಯತ್ನಿಸಬೇಕು' ಎಂಬುದರ ಬಗೆಗಿನ ಮಾರ್ಗದರ್ಶನ ಈ ಗ್ರಂಥದಲ್ಲಿ ಮಾಡಲಾಗಿದೆ.

ಪರಾತ್ಪರ ಗುರು ಡಾ. ಆಠವಲೆಯವರ ಪ್ರೇರಣಾದಾಯಕ ವಿಚಾರಗಳಿಂದ ಸ್ಫೂರ್ತಿ ಪಡೆದು ಮುಂಬರುವ ಕಾಲದಲ್ಲಿ ಹಿಂದೂ ಸಮಾಜಕ್ಕೆ ಭಾರತಭೂಮಿಯಲ್ಲಿ ರಾಮ ರಾಜ್ಯದ ಅನುಭೂತಿಯನ್ನು ನೀಡುವ 'ಹಿಂದೂ ರಾಷ್ಟ್ರ'ವನ್ನು ಸ್ಥಾಪಿಸಲು ಅಳಿಲುಸೇವೆ ಯಲ್ಲ, ಹನುಮಂತನಂತಹ ಸೇವೆ ನಿರ್ವಹಿಸುವ ಪ್ರೇರಣೆ ಸಿಗಬೇಕು ಮತ್ತು ಅವರು ಈ ಕಾರ್ಯಕ್ಕಾಗಿ ಶಾರೀರಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಸ್ತರದಲ್ಲಿ ಎಡೆಬಿಡದೆ ಶ್ರಮಿಸಬೇಕು ಎಂದು ಪ್ರಭು ಶ್ರೀರಾಮನ ಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**

**ಅನುಕ್ರಮಣಿಕೆ**

(ಕೆಲವು ಮಹತ್ವದ ಅಂಶಗಳನ್ನು * ಈ ಗುರುತಿನಲ್ಲಿ ಕೊಡಲಾಗಿದೆ.)


**ಅಧ್ಯಾಯ ೧ : 'ಹಿಂದೂ ರಾಷ್ಟ್ರ' : ಮೂಲಭೂತ ವಿಚಾರ** ೧೧

೧. ವ್ಯಾಖ್ಯೆ ಮತ್ತು ಸಮನಾರ್ಥಕ ಶಬ್ದಗಳು ೧೧

೨. ಹಿಂದೂ ರಾಷ್ಟ್ರದ ಸ್ಥಾಪನೆಯ ಆದರ್ಶ ೧೨

೩. ಹಿಂದೂ ರಾಷ್ಟ್ರದ ಬೇಡಿಕೆಯನ್ನು ಮಾಡುವುದು, ಹಿಂದೂಗಳ ಸಾಂವಿಧಾನಿಕ ಅಧಿಕಾರವಾಗಿದೆ ! ೧೪

೪. 'ಹಿಂದೂ ರಾಷ್ಟ್ರ' ಶಬ್ದವನ್ನು ವಿರೋಧಿಸುವವರಿಗೆ ಮುಂದಿನ ಪ್ರಶ್ನೆಗಳನ್ನು ಕೇಳಿ ! ೧೫

೫. ಹಿಂದೂ ರಾಷ್ಟ್ರದ ಸ್ಥಾಪನೆಯಾದ ನಂತರವೇ 'ಒಳ್ಳೆಯ ದಿನಗಳು' ('ಅಚ್ಛೇ ದಿನ್') ಬರುವವು ! ೧೬

೬. ಹಿಂದೂ ರಾಷ್ಟ್ರದ ಸ್ಥಾಪನೆಯ ಸೂಕ್ಷ್ಮದಲ್ಲಿನ ಮತ್ತು ಸ್ಥೂಲದಲ್ಲಿನ ಪ್ರಕ್ರಿಯೆಯನ್ನು ತಿಳಿದುಕೊಳ್ಳಿ ! ೧೭

**ಅಧ್ಯಾಯ ೨ : ಹಿಂದೂ ರಾಷ್ಟ್ರದ ಸ್ಥಾಪನೆಯ ದೃಷ್ಟಿಯಿಂದ ಸಾಧನೆಯ ಮಹತ್ವ** ೨೧

೧. ಹಿಂದೂ ರಾಷ್ಟ್ರವನ್ನು ಸ್ಥಾಪಿಸಲು ಸದ್ಯದ ಹೆಚ್ಚಿನ ಜಾತ್ಯತೀತ ರಾಜಕಾರಣಿಗಳು ಏಕೆ ಅಪಾತ್ರರಾಗಿದ್ದಾರೆ ? ೨೧

೨. ಧರ್ಮಾಚರಣಿ ಹಿಂದೂಗಳೇ 'ಹಿಂದೂ ರಾಷ್ಟ್ರ'ವನ್ನು ಸ್ಥಾಪಿಸಬಲ್ಲರು ! ೨೧

೩. ಸಾಧನೆ ಎಂದರೆ ಏನು ? ೨೪

೪. ಹಿಂದೂ ರಾಷ್ಟ್ರದ ಸ್ಥಾಪನೆಯ ಕಾರ್ಯವನ್ನು ಮಾಡುವಾಗ ಯಾವ ಸಾಧನೆಯನ್ನು ಮಾಡಬೇಕು ? ೨೪

೫. ಹಿಂದೂ ರಾಷ್ಟ್ರದ ಸ್ಥಾಪನೆಯ ದೃಷ್ಟಿಯಿಂದ ಸಾಧನೆಯ ಆವಶ್ಯಕತೆ ೨೬

೬. ಹಿಂದುತ್ವವಾದಿ ಸಂಘಟನೆಗಳು ತಮ್ಮ ಕಾರ್ಯಕರ್ತರಿಗೂ ಸಾಧನೆಯನ್ನು ಮಾಡಲು ಪ್ರವೃತ್ತಗೊಳಿಸುವುದು ಆವಶ್ಯಕ ! ೩೦

**ಅಧ್ಯಾಯ ೩ : ಹಿಂದೂ ರಾಷ್ಟ್ರದ ಸ್ಥಾಪನೆಯ ದೃಷ್ಟಿಯಿಂದ ಬ್ರಾಹ್ಮತೇಜದ (ಆಧ್ಯಾತ್ಮಿಕ ಬಲದ) ಮಹತ್ವ** ೩೨

* ಬ್ರಾಹ್ಮತೇಜವೆಂದರೇನು ? * ಬ್ರಾಹ್ಮತೇಜದ ಆವಶ್ಯಕತೆ ೩೨

* ಬ್ರಾಹ್ಮತೇಜದ ಮೂಲಕ ಕಾರ್ಯ ಹೇಗಾಗುತ್ತದೆ ? ೩೨

* ಬ್ರಾಹ್ಮತೇಜದ ಮಹತ್ವ ೩೪

**ಅಧ್ಯಾಯ ೪ : ಹಿಂದೂ ರಾಷ್ಟ್ರದ ನಿರ್ಮಿತಿಯ ಅನಿವಾರ್ಯ ಪ್ರಕ್ರಿಯೆ : ಸೂಕ್ಷ್ಮದಲ್ಲಿನ 'ದೇವಾಸುರರ ಯುದ್ಧ' !** ೩೭

* ದೇವಾಸುರರ ಯುದ್ಧವೆಂದರೇನು ? ೩೭
* ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸ್ತರಗಳಲ್ಲಿನ ಪ್ರಯತ್ನಗಳ ತುಲನೆ ೪೨

**ಅಧ್ಯಾಯ ೫ : ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಸಾಂಪ್ರದಾಯಿಕ ಐಕ್ಯತೆಯ ಆವಶ್ಯಕತೆ ೪೪**

* ಎಲ್ಲ ಸಂಪ್ರದಾಯಗಳಲ್ಲಿರುವ ನಿಃಸ್ವಾರ್ಥ ಮತ್ತು ಅಹಂಭಾವಶೂನ್ಯ ಅನುಯಾಯಿಗಳಿಂದ ಹಿಂದೂ ರಾಷ್ಟ್ರದ ಸ್ಥಾಪನೆ ಸಾಧ್ಯವಿದೆ ! ೪೪
* ವಿವಿಧ ಸಂಪ್ರದಾಯಗಳಿಗನುಸಾರ ಸಾಧನೆ ಮಾಡುವವರೇ, ಧರ್ಮಸಂಸ್ಥಾಪನೆಯ, ಅಂದರೆ ಹಿಂದೂ ರಾಷ್ಟ್ರದ ಸ್ಥಾಪನೆಯ ಕಾರ್ಯವನ್ನು ಮಾಡಿ ! ೪೪

**ಅಧ್ಯಾಯ ೬ : ಹಿಂದುತ್ವನಿಷ್ಠ ಸಂಘಟನೆಗಳು ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಒಟ್ಟಾಗಿ ಕಾರ್ಯ ಮಾಡುವ ದಿಶೆ !** ೪೬

೧. ನಿಃಸ್ವಾರ್ಥ ಹಿಂದುತ್ವವಾದಿ ಸಂಘಟನೆಗಳು ಹಿಂದೂ ಧರ್ಮದ ಸ್ಥಾಪನೆಯ ನ್ಯಾಯ ಬೇಡಿಕೆಗಾಗಿ ಏಕೆ ಒಟ್ಟಾಗಲಾರವು ? ೪೬

೨. ಹಿಂದುತ್ವನಿಷ್ಠ ಸಂಘಟನೆಗಳು ರಾಷ್ಟ್ರೀಯ ಸ್ತರದಲ್ಲಿ ಒಟ್ಟಾಗಿ ಕಾರ್ಯ ಮಾಡುವುದರಿಂದಾಗುವ ಲಾಭಗಳು ೪೭

  * ಸ್ಥಳೀಯ ಸ್ತರದ ಹಿಂದೂ ಆಂದೋಲನಗಳ ರಾಷ್ಟ್ರೀಕರಣವಾಗುವುದು! ೪೭

೩. ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಹಿಂದುತ್ವವಾದಿ ಸಂಘಟನೆಗಳು ಒಂದಾಗಿ ಕಾರ್ಯ ಮಾಡುವ ದಿಶೆ ! ೪೮

  * ಬ್ರಾಹ್ಮತೇಜ ಮತ್ತು ಕ್ಷಾತ್ರತೇಜ ಇವು ಒಟ್ಟಾಗಿ ಕಾರ್ಯ ಮಾಡುವುದು ಅಪೇಕ್ಷಿತ ! ೪೮
  * ವಿಚಾರವಂತರು ಮತ್ತು ಪ್ರತ್ಯಕ್ಷ ಕೃತಿ ಮಾಡುವವರು ಒಟ್ಟಾಗಿ ಕಾರ್ಯ ಮಾಡುವುದು ಆವಶ್ಯಕ ! ೪೮
  * ತೀವ್ರಗಾಮಿ ಮತ್ತು ಮಂದಗಾಮಿ ಸಂಘಟನೆಗಳು ಪರಸ್ಪರ ಪೂರಕ ಕಾರ್ಯವನ್ನು ಮಾಡುವುದು ಆವಶ್ಯಕ ! ೪೯

**ಅಧ್ಯಾಯ ೭ : ಹಿಂದೂ ರಾಷ್ಟ್ರದ ಸ್ಥಾಪನೆಯಲ್ಲಿ ವಿಚಾರವಂತರ ಮಹತ್ವ** ೫೦

* ಸಮಾಜದಲ್ಲಿನ ಅನೇಕ ಘಟಕಗಳ ಸಂಘಟನೆಯಾಗುತ್ತಿರುವಾಗ ಹಿಂದುತ್ವನಿಷ್ಠ ವಿಚಾರವಂತರ ಸಂಘಟನೆಯಾಗುವುದೂ ಆವಶ್ಯಕ ! ೫೩

**ಅಧ್ಯಾಯ ೮ : ಹಿಂದೂ ರಾಷ್ಟ್ರದ ಸ್ಥಾಪನೆಯ ಪ್ರತ್ಯಕ್ಷ ಕಾರ್ಯ** ೫೪

೧. ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಕಾರ್ಯವನ್ನು ಮಾಡುವವರ ಮಟ್ಟ ಮತ್ತು ಅವರ ಕಾರ್ಯದ ಸ್ವರೂಪ ೫೪

೨. ಹಿಂದೂ ರಾಷ್ಟ್ರದ ಸ್ಥಾಪನೆಯ ಕಾರ್ಯದಲ್ಲಿನ ಘಟಕಗಳು ೫೫

* ಧರ್ಮಶಿಕ್ಷಣ * ಧರ್ಮದ ಬಗ್ಗೆ ಜಾಗೃತಿ ೫೬
* ರಾಷ್ಟ್ರ ಮತ್ತು ಧರ್ಮದ ರಕ್ಷಣೆ ೫೬

೩. ಧರ್ಮಕ್ರಾಂತಿಯೇ, ಹಿಂದೂ ರಾಷ್ಟ್ರದ ಸ್ಥಾಪನೆಯ ಅಂತಿಮ ಮಾರ್ಗ ! ೫೮

೪. ಧರ್ಮಕ್ರಾಂತಿ ಎಂದರೆ ಕೇವಲ ಕ್ರಾಂತಿಯಲ್ಲ, ಅದು ಉತ್ಕ್ರಾಂತಿಯಾಗಿದೆ ! ೫೮

೫. ಹಿಂದೂ ರಾಷ್ಟ್ರದ ಸ್ಥಾಪನೆಯ ವೇಳಾಪಟ್ಟಿ ೫೯

೬. ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಆವಶ್ಯಕ ಧರ್ಮಕ್ರಾಂತಿಯಾಗಲು ಇದನ್ನು ಮಾಡಿ ! ೫೯

* ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಜನತೆಯು ಕೇಂದ್ರಬಿಂದು ಮತ್ತು ಜನಜಾಗೃತಿಯೇ ಮಾಧ್ಯಮ ! ೫೯
* ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಹಿಂದೂಗಳಿಗೆ ರಾಜಕೀಯ ದೃಷ್ಟಿಯನ್ನು ನೀಡಲು ಪ್ರಯತ್ನಿಸಿ ! ೬೦
* ಹಿಂದೂಗಳ ಪ್ರಭಾವಿ ಸಂಘಟನಾಶಕ್ತಿಯನ್ನು ನಿರ್ಮಿಸುವುದು ಧರ್ಮಕ್ರಾಂತಿಯ ಮಹತ್ವದ ಹಂತ ! ೬೨

**ಅಧ್ಯಾಯ ೯ : ಹಿಂದೂ ರಾಷ್ಟ್ರದ ಸ್ಥಾಪನೆಯ ಮುಂಬರುವ ಕಾಲದ ಕಾರ್ಯದ ದಿಶೆ** ೬೪

* ಹಿಂದೂ ರಾಷ್ಟ್ರದ ಸ್ಥಾಪನೆಯು ಮೂರು ಪೀಳಿಗೆಗಳು ಮಾಡಬೇಕಾದ ಕಾರ್ಯವಾಗಿದೆ ! ೬೪

**ಅಧ್ಯಾಯ ೧೦ : ಹಿಂದೂ ರಾಷ್ಟ್ರದ ಸ್ಥಾಪನೆಯ ಕಾರ್ಯದಲ್ಲಿ ಸಹಭಾಗಿಯಾಗಿರಿ !** ೬೮

* ಹಿಂದೂ ರಾಷ್ಟ್ರವನ್ನು ಸ್ಥಾಪಿಸುವುದು ಮೊದಲನೇ ಹಂತವಾಗಿದ್ದರೆ, ‘ಜಗತ್ತಿನಾದ್ಯಂತ ಹಿಂದೂ ಧರ್ಮದ ಸ್ಥಾಪನೆಯನ್ನು ಮಾಡುವುದು’ ಕೊನೆಯ ಹಂತವಾಗಿದೆ ! ೭೦

**ಟಿಪ್ಪಣಿ** ಗ್ರಂಥದಲ್ಲಿನ ಪ್ರತಿಯೊಂದು ವಿಚಾರದ ಕೊನೆಗೆ ಕಂಸದಲ್ಲಿ ದಿನಾಂಕ ಅಥವಾ ವರ್ಷಗಳನ್ನು ನೀಡಲಾಗಿದೆ. ಪ.ಪೂ. ಡಾ. ಆಠವಲೆಯವರು ಆ ದಿನ ಆಯಾ ವಿಚಾರಗಳನ್ನು ಬರೆದಿದ್ದಾರೆ.